## 11. ನೈಸ್ ವಾದಕ್ಕೆ ಸುಪ್ರೀಂನಲ್ಲಿ ಹಿನ್ನಡೆ

ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಮತ್ತು ರಾಜ್ಯ ಸರ್ಕಾರದ ಒಪ್ಪಂದದಲ್ಲಿ ಅಡಕವಾಗಿರುವ ಅಂಶಗಳಿಗೆ ಬದ್ಧವಾಗಿ ವಸತಿ ಯೋಜನೆಗಳನ್ನು ಜಾರಿ ಮಾಡಬೇಕು. ಸರ್ಕಾರದ ಅನುಮತಿ ಇಲ್ಲದೆ ತಮ್ಮಿಷ್ಟದಂತೆ ಯೋಜನೆ ಅನುಷ್ಠಾನಕ್ಕೆ ಮುಂದಾಗುವುದನ್ನು ಒಪ್ಪಲಾಗದು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಹಾಗೂ ದಿನೇಶ್ ಮಹೇಶ್ವರಿ ಅವರಿದ್ದ ಪೀಠ, ಒಪ್ಪಂದದಲ್ಲಿ ಇಲ್ಲದ ಅಂಶಗಳಿಗೆ ಜಮೀನು ಬಳಕೆ ಮಾಡಬೇಕೆಂದಿದ್ದರೆ ಸರ್ಕಾರ ಮತ್ತು ಯೋಜನಾ ಪ್ರಾಧಿಕಾರದ ಅನುಮತಿ ಅವಶ್ಯಕ. ಯೋಜನೆದಾರರ ಉದ್ದೇಶ ಹಾಗೂ ಪ್ರಸ್ತಾವನೆಗೆ 6 ತಿಂಗಳೊಳಗೆ ಸರ್ಕಾರ ತನ್ನ ನಿರ್ಧಾರ ತಿಳಿಸಬೇಕು. ಇದಾದ ಬಳಿಕವಷ್ಟೇ ಯೋಜನೆ ಬಗ್ಗೆ ಯೋಜನಾ ಪ್ರಾಧಿಕಾರಕ್ಕೆ ಯೋಜನೆದಾರರು ಮನವಿ ಸಲ್ಲಿಸಬೇಕು ಎಂದು ಸ್ಪಷ್ಟಪಡಿಸಿದೆ.

ಮೂಲ ಒಪ್ಪಂದದಲ್ಲಿ ದಾಖಲಾಗಿರದ ಅಂಶಗಳನ್ನು ರಾಜ್ಯ ಸರ್ಕಾರ ಮತ್ತು ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಒಪ್ಪಿಗೆ ಪಡೆಯದೆ ವಸತಿ ಯೋಜನೆ ಕೈಗೆತ್ತಿಕೊಳ್ಳಲು ನೈಸ್ ಮುಂದಾಗಿತ್ತು. ಆದರೆ, ಈ ಕ್ರಮವನ್ನು ಸುಪ್ರೀಂಕೋರ್ಟ್ ತಳ್ಳಿಹಾಕಿರುವುದರಿಂದ ನೈಸ್ ಸಂಸ್ಥೆಗೆ ಹಿನ್ನಡೆಯಾಗಿದೆ. 2012ರಲ್ಲಿ 53.5 ಎಕರೆ ಭೂಮಿಯಲ್ಲಿ ಸಮೂಹ ವಸತಿ ಯೋಜನೆ ಕೈಗೆತ್ತಿಕೊಳ್ಳಲು ಯೋಜನಾ ಪ್ರಾಧಿಕಾರದ ಬಳಿ ನೈಸ್ ಅನುಮತಿ ಕೇಳಿತ್ತು. ಇದರಲ್ಲಿ ಕೆಲ ಭೂಮಿಗಳ ಸೇಲ್‌ಡೀಡ್ ಆಗಿರಲಿಲ್ಲ. 42.30 ಎಕರೆ ಭೂಮಿಯಲ್ಲಿ ಪರಿಷ್ಕೃತ ಯೋಜನೆ ಬಗ್ಗೆ ನೈಸ್ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪ್ರಾಧಿಕಾರ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ನೈಸ್ ಸಂಸ್ಥೆ ಹೈಕೋರ್ಟ್ ಮೆಟ್ಟಿಲೇರಿತ್ತು. ಹೈಕೋರ್ಟ್ ನೈಸ್‌ವಾದ ಪುರಸ್ಕರಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸರ್ಕಾರ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

ಆಧಾರ:ವಿಜಯವಾಣಿ, ದಿನಾಂಕ:20.05.2020